ಅಬಕಾರಿ ಉಪ ಆಯುಕ್ತರ ವರದಿ ಪ್ರಕಾರ ದಾಳಿ ಮಾಡಿದ ಸ್ಥಳವು ಅಪರಾಧಿಗಳಲ್ಲೊಬ್ಬರಾದ ರಾಮಚಂದ್ರರೆಡ್ಡಿಯವರಿಗೆ ಸೇರಿದ್ದು, ಆ ಜಾಗವನ್ನು ಬಾಗೇಪಲ್ಲಿ ತಾಲ್ಲೂಕಿನ ಹಾಲಿ ಅಬಕಾರಿ ಗುತ್ತಿಗೆದಾರರಾದ ರಾಮಕೃಷ್ಣಪ್ಪ ಎಂಬುವರಿಗೆ ಬಾಡಿಗೆ ಕೊಟ್ಟಿರುವುದಾಗಿ ತಿಳಿದುಬಂದಿದೆ ಎಂದು ವರದಿ ಮಾಡಿರುತ್ತಾರೆ.

ಈ ವಿಷಯದಲ್ಲಿ ಇದಕ್ಕಿಂತ ಮೊದಲು ಚಿಂತಾಮಣಿ ಸಂಚಾರಿ ದಳದವರು ಸದರಿ ಗುತ್ತಿಗೆದಾರರ ಮೇಲೆ ಅಕ್ರಮವಾಗಿ ಬಾಟಲಿಂಗ್ ನಡೆಸುತ್ತಿದ್ದರೆಂಬ ಅನುಮಾನದ ಮೇಲೆ ಕ್ರೈಂ ನಂ. ೧೬-೮೫-೮೬ರ ದಿನಾಂಕ ೨೪-೮-೧೯೮೫ರಲ್ಲಿ ಮೊಕದ್ದಮೆ ದಾಖಲು ಮಾಡಿರುವುದಾಗಿ ವರದಿ ಮಾಡಿರುತ್ತಾರೆ.

ಈ ಎರಡೂ ಮೊಕದ್ದಮೆಗಳು ತನಿಖೆಯಲ್ಲಿವೆ.

ಮೇಲಿನ ಕಾರಣದಿಂದ ಬಾಗೇಪಲ್ಲಿ ಅಬಕಾರಿ ಗುತ್ತಿಗೆದಾರರು ಈ ಪ್ರಕರಣದ ಹಿಂದೆ ಇರುವರೆಂದು ಸಂಶಯಪಡಲಾಗಿದೆ.

## (ii) ಕುಂದಾಪುರ ತಾಲ್ಲೂಕಿನ ಸಿದ್ದಾಪುರದಲ್ಲಿ ಉಂಟಾದ ಬೆಂಕಿ ಆಕಸ್ಮಿಕದಲ್ಲಿ ನೊಂದವರಿಗೆ ಮುಖ್ಯಮಂತ್ರಿ ನಿಧಿಯಿಂದ ಪರಿಹಾರ ಕೊಡುವ ಬಗ್ಗೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಬೆಂಕಿ ಆಕಸ್ಮಿಕದಲ್ಲಿ ನೊಂದವರಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಪರಿಹಾರ ಕೊಡುವ ಕುರಿತು —

ಕುಂದಾಪುರ ಕ್ಷೇತ್ರದ ಸಿದ್ದಾಪುರ ಗ್ರಾಮದ ಬಡ ರೈತ ಕುಟುಂಬದ ಕೊರಗಯ್ಯಶೆಟ್ಟಿ ಎಂಬುವರ ಮನೆ ಹಾಗೂ ಹಟ್ಟಿ ತಾರೀಖು ೮-೧-೧೯೮೫ ರಂದು ಆಕಸ್ಮಿಕ ಬೆಂಕಿ ತಗುಲಿ ೮ ಜಾನುವಾರುಗಳು, ಅಕ್ಕಿ, ಭತ್ತ ಮತ್ತು ನಿತ್ಯ ಉಪಯೋಗಿಸುವಂಥ ವಸ್ತುಗಳು ಹಾಗೂ ಸಲಕರಣೆಗಳು ಸಂಪೂರ್ಣ ಬೆಂಕಿಯಿಂದ ನಾಶವಾಗಿದ್ದು ಬಡ ರೈತ ಕುಟುಂಬದವರು ನಿರ್ಗತಿಕರಾಗಿದ್ದಾರೆ. ಈಗಾಗಲೇ ೩೦ ರೂ. ತಾಲ್ಲೂಕು ತಹಶೀಲ್ದಾರರವರಿಂದ ಪರಿಹಾರ ದೊರಕಿದ್ದು ಉಪ ವಿಭಾಗಾಧಿಕಾರಿಯವರಿಗೆ ಹೆಚ್ಚಿನ ಪರಿಹಾರಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಪರಿಹಾರಗಳಿಂದ ಮನೆ, ಹಟ್ಟಿ ಹಾಗೂ ಜಾನುವಾರುಗಳು ಕೊಳ್ಳಲು ಕಷ್ಟವಾದುದರಿಂದ ಕರ್ನಾಟಕ ಸರಕಾರದ ಮಾನ್ಯ ಮುಖ್ಯ ಮಂತ್ರಿಗಳು ಗಮನಹರಿಸಿ ತಮ್ಮ ಪರಿಹಾರ ನಿಧಿಯಿಂದ ಹೆಚ್ಚಿನ ಪರಿಹಾರವನ್ನು ಕೊಟ್ಟು ನಿರ್ಗತಿಕ ಬಡ ರೈತ ಕುಟುಂಬವನ್ನು ರಕ್ಷಿಸ ಬೇಕೆಂದು ಈ ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತಿದ್ದೇನೆ.

(ಮುಖ್ಯಮಂತ್ರಿಯವರ ಪರವಾಗಿ)

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ, ಕುಂದಾಪುರ ಕ್ಷೇತ್ರದ ಸಿದ್ದಾಪುರ ಗ್ರಾಮದ ನಿವಾಸಿಯಾದ ಶ್ರೀ ಕೊರಗಯ್ಯಶೆಟ್ಟಿ ಎಂಬುವರ ಮನೆ ಹಾಗು ಹಟ್ಟಿಗೆ ತಾರೀಖು ೮-೧-೧೯೮೫ ರಂದು ಆಕಸ್ಮಿಕ ಬೆಂಕಿ ತಗುಲಿ ೮ ಜಾನುವಾರುಗಳು, ಅಕ್ಕಿ ಭತ್ತ ಮತ್ತು ನಿತ್ಯ ಉಪಯೋಗಿಸುವಂತಹ ವಸ್ತುಗಳು ಹಾಗೂ ಸಲಕರಣೆಗಳು ಸಂಪೂರ್ಣ ಬೆಂಕಿಯಿಂದ ನಾಶವಾಗಿದ್ದು, ಈ ಕುಟುಂಬವು ನಿರ್ಗತಿಕರಾಗಿರುವುದರಿಂದ ಸೂಕ್ತ ಆರ್ಥಿಕ ನೆರವನ್ನು ಪರಿಹಾರ ನಿಧಿಯಿಂದ ಮಂಜೂರು ಮಾಡಲು ವಿನಂತಿಸಲಾಗಿದೆ. ಕಂದಾಯ ಇಲಾಖೆಯ ನಿಯಮಾವಳಿಯಲ್ಲಿ ಈ ರೀತಿಯ ಘಟನೆಗಳಿಗೆ ಪರಿಹಾರ ಧನ ಕೊಡುವ ಬಗ್ಗೆ ಅವಕಾಶವಿದೆ. ಒಂದು ವೇಳೆ ಕೊಟ್ಟಿರುವ ಹಣ ಸಾಲದೇ ಹೋದಲ್ಲಿ ಪರಿಹಾರ ನಿಧಿಯಿಂದ ಆರ್ಥಿಕ ನೆರವನ್ನು ನೀಡುವ ಬಗ್ಗೆ ವಿವರವಾದ ವರದಿಯನ್ನು ಜಿಲ್ಲಾಧಿಕಾರಿಗಳಿಂದ ಪಡೆದು ಪರಿಶೀಲಿಸಲಾಗುವುದು.

## (iii) ಪುತ್ತೂರಿನಲ್ಲಿ ಕೆ.ಇ.ಬಿ. ಡಿವಿಜನಲ್ ಆಫೀಸನ್ನು ಪ್ರಾರಂಭ ಮಾಡುವ ಬಗ್ಗೆ.

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ಪುತ್ತೂರು ತಾಲ್ಲೂಕು ಸಬ್‌ಡಿವಿಜನಲ್ ಸೆಂಟರ್ ಆಗಿದ್ದು ಪುತ್ತೂರಿನಲ್ಲಿ ಕೆ.ಇ.ಬಿ. ಡಿವಿಜನಲ್ ಆಫೀಸ್ ಆಗಬೇಕು ಎಂದು ಬಹು ಹಿಂದಿನಿಂದ ಇಲಾಖಾವತಿಯಿಂದ ಪ್ರಸ್ತಾಪವಿದ್ದು ಇದರ ಮಟ್ಟಿಗೆ ಯಾವುದೇ ರೀತಿ ಪ್ರಗತಿಪರ ಕೆಲಸ ಕಾರ್ಯ ನಡೆದುಬಂದಿಲ್ಲ. ವಿಟ್ಲ, ಬೆಳ್ತಂಗಡಿ, ಬಂಟ್ವಾಳ, ಕಡಬ ಸುಳ್ಯ ಮಧ್ಯದಲ್ಲಿ ಪುತ್ತೂರು ತಾಲ್ಲೂಕು ಇದ್ದು ಇವೆಲ್ಲಾ ಪ್ರದೇಶ ಕೃಷಿ ಹಾಗೂ ಕೈಗಾರಿಕಾ ಮಟ್ಟದಲ್ಲಿ ಹೆಚ್ಚಿಗೆ ವೇಗದಿಂದ ಮುಂದೆ